(ಈ) ವಿಚಾರಣಾ ಅಧಿಕಾರಿಗಳಾಗಿ ನೇಮಕಗೊಂಡ ಅಧಿಕಾರಿಗಳು ಮೇಲಿಂದ ಮೇಲೆ ವರ್ಗವಾಗುತ್ತಿರುವುದರಿಂದ ವಿಚಾರಣೆಯಲ್ಲಿ ವಿಳಂಬವಾಗುತ್ತಿದೆ.

SRI A. LAKSHMISAGAR.— I wish to submit further that the enquiries will be expedited and soon a decision will be taken.

SRI R. S. MANE.—To keep employees under suspension for more than six months is against rule 189 of the Karnataka Municipalities (Conditions of Service of Officers and Servants) Rules, 1972. It is admitted that out of six officers only one has been reinstated. I would like to know why the rest of them are not reinstated ? When are they going to reinstate them ?

SRI A. LAKSHMISAGAR.—Action will be taken according to the rules.

## ಸವದತ್ತಿ ನಗರದಲ್ಲಿ ಮುನ್ಸಿಫ್ ಮತ್ತು ಪ್ರಥಮ ದರ್ಜೆಯ ನ್ಯಾಯಾಲಯ ಕಟ್ಟಡದ ಬಗ್ಗೆ

*೫೫೨. ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ (ಪರಸಗಡ).— ಮಾನ್ಯ ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಸವದತ್ತಿ ನಗರದಲ್ಲಿ ಮುನಸೀಫ್ ಮತ್ತು ಪ್ರಥಮ ದರ್ಜೆಯ ನ್ಯಾಯಾಲಯ ಕಟ್ಟಡ ಕಟ್ಟುವ ಕೆಲಸ ಆರಂಭವಾಗಿದೆಯೆ,

(ಆ) ಹಾಗಿಲ್ಲದಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು).—

(ಅ) ಇಲ್ಲ

(ಆ) ಟೆಂಡರುಗಳ ಬಗ್ಗೆ ಅಂತಿಮ ತೀರ್ಮಾನ ಕೈಗೊಳ್ಳದೆ ಇರುವುದರಿಂದ

ಶ್ರೀ ಚಂದ್ರಶೇಖರ್ ಮಲ್ಲಿಕಾರ್ಜುನ ಮಾಮನಿ.—ಮಾನ್ಯ ಅಧ್ಯಕ್ಷರೇ, ಹೋದ ಸಲ ಈ ಪ್ರಶ್ನೆಯನ್ನು ಕೇಳಿದಾಗಲೂ ಸಹ ಮಾನ್ಯ ಮಂತ್ರಿಯವರು ಇದೇ ರೀತಿ ಉತ್ತರವನ್ನು ಕೊಟ್ಟಿದ್ದಾರೆ. ಇದುವರೆಗೂ ಕಟ್ಟಡದ ಕೆಲಸ ಪ್ರಾರಂಭವಾಗಿಲ್ಲ. ಆದ್ದರಿಂದ ಎಂದು ಕಟ್ಟಡ ಪ್ರಾರಂಭವಾಗುತ್ತದೆಂದು ನಿಶ್ಚಿತವಾಗಿ ಹೇಳಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಅಧಿಕಾರಿಗಳ ಮಟ್ಟದಲ್ಲಿ ಇದರ ಬಗ್ಗೆ ಚರ್ಚೆಯಾಗಿ, ಕಟ್ಟಡವನ್ನು ಕಟ್ಟಿಸುವುದಕ್ಕೆ ಟೆಂಡರುಗಳನ್ನು ಕರೆದಿದ್ದೇವೆ. ಟೆಂಡರುಗಳನ್ನು ಸಲ್ಲಿಸುವ ಕೊನೆಯ ದಿನಾಂಕ ೧೦-೩-೧೯೮೬ ಎಂದು ತಿಳಿಸಿದ್ದೇವೆ. ಆದಷ್ಟು ಬೇಗ ಈ ಕೆಲಸವನ್ನು ಮುಗಿಸುವುದಕ್ಕೆ ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ.— ಮಾನ್ಯ ಅಧ್ಯಕ್ಷರೇ, ಸವದತ್ತಿ ನಗರದಲ್ಲಿ ಪ್ರಥಮ ದರ್ಜೆಯ ನ್ಯಾಯಾಲಯದ ಕಟ್ಟಡವನ್ನು ಕಟ್ಟುವುದಕ್ಕೆ ಸರ್ಕಾರದವರು ಯಾವ ಜಾಗವನ್ನು ಅಕ್ವೈಯರ್ ಮಾಡಿಕೊಂಡಿದ್ದಾರೋ, ಆ ಜಾಗದ ಮೇಲೆ ಒಂದು ದೇವಸ್ಥಾನದ ಆಡಳಿತ ಮಂಡಳಿಯವರು ತಕರಾರನ್ನು ಹಾಕಿದ್ದಾರೆ. ಈ ತಕರಾರು ಮಾನ್ಯ ಸಚಿವರಿಗೆ ಗೊತ್ತಿದೆಯೇ ? ಈ ತಕರಾರಿನಿಂದ ಕೆಲಸ ಸ್ಥಗಿತಗೊಂಡಿರುವ ಬಗ್ಗೆ ತಿಳಿದಿದೆಯೆ ? ಅದನ್ನ ಬಗ್ಗೆ ಏನು ಕ್ರಮ ತೆಗೆದು ಕೊಳ್ಳುತ್ತೀರೆಂದು ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದಿರುವ ವಿಷಯದ ಬಗ್ಗೆ ಪರಿಶೀಲನೆ ನಡೆಸಿ ಸರಿಯಾದಂಥ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾವಿನಿ.—ಹೋದ ಸಾರಿಯೂ ಇದೇ ತರದ ಉತ್ತರವನ್ನು ಮಾನ್ಯ ಸಚಿವರು ಕೊಟ್ಟಿದ್ದರು. ಈ ಸಾರಿ ಆ ರೀತಿ ಮಾಡದೇ ಕೆಲಸವನ್ನು ಮಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಆದಷ್ಟು ಬೇಗ ಈ ಜಮೀನಿನ ವಿವಾದ ಬಗ್ಗೆ ಗಮನ ಹರಿಸುತ್ತೇನೆ.

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ. ಹೋದ ಸದನದಲ್ಲಿ ಇದೇ ಪ್ರಶ್ನೆಯನ್ನು ಕೇಳಿದ್ದಾಗ, ಕ್ರಮ ತೆಗೆದುಕೊಳ್ಳುತ್ತೇನೆಂದು ಮಾನ್ಯ ಮಂತ್ರಿಯವರು ಹೇಳಿದ್ದರು. ಉಪ ಪ್ರಶ್ನೆಯಲ್ಲಿ, ಯಾವ ಮನೆಗಳು ಸರಿಯಾಗಿ ಕಟ್ಟಿಲ್ಲವೋ ಅಂತಹ ಮನೆಗಳನ್ನು ಕಟ್ಟಿದವರ ಮೇಲೆ ಕ್ರಮ ತೆಗೆದುಕೊಳ್ಳಿ ಎಂದು ಕೇಳಿದೆ. ಅದನ್ನು ವಿಚಾರಣೆ ಮಾಡಿ, ಕಟ್ಟಡಗಳನ್ನು ಪುನಃ ಕಟ್ಟಿಸುತ್ತೇನೆ ಮತ್ತು ಸಂಬಂಧಪಟ್ಟ ಇಂಜಿನೀಯರ್‌ಗಳ ಮೇಲೆ ಕ್ರಮವನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದರು. ಈಗ ಮತ್ತೆ ಅದೇ ಪ್ರಶ್ನೆಯನ್ನು ಈ ಸದನದಲ್ಲಿ ಕೇಳಿದಾಗ ಹಿಂದಿನ ಅದೇ ಉತ್ತರವನ್ನು ಕೊಟ್ಟರೆ ಹೇಗೆ? ನಾವು ಪ್ರಶ್ನೆಯನ್ನು ಸದನದಲ್ಲಿ ಕೇಳುವುದು ತಪ್ಪೇ? ಈ ಸದನಕ್ಕೆ ಗೌರವ ಇದೆಯೋ ಇಲ್ಲವೋ ಎಂಬ ಪ್ರಶ್ನೆ ಉದ್ಭವಾಗುತ್ತದೆ. ಸದನಕ್ಕೆ ಗೌರವ ಕೊಡದೇ ಇದ್ದರೆ ನಾವು ಪ್ರಶ್ನೆಯನ್ನು ಏಕೆ ಕೇಳಬೇಕು?

ಶ್ರೀ ಪಿ. ಜಿ. ಆರ್. ಸಿಂಧ್ಯ,—ಕಟ್ಟಡಗಳನ್ನು ಕಟ್ಟಿಸಿದ ಇಂಜಿನೀಯರ್‌ರವರಿಂದ ಸುಮಾರು ೮ ಸಾವಿರ ಚಿಲ್ಲರೇ ಹಣವನ್ನು ವಸೂಲಿ ಮಾಡಿದ್ದೇವೆ. ಅವರ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಈಗ ಒಬ್ಬರು ರಿಟೈರ್ಡ್ ಆಗಿದ್ದಾರೆ. ಇನ್ನುಳಿದ ಇಂಜಿನೀಯರ್‌ಗಳು ನಮ್ಮ ಇಲಾಖೆಗೆ ಸಂಬಂಧಪಡದೇ ಇರುವುದರಿಂದ ನಾನೂ ಲೋಕೋಪಯೋಗಿ ಮಂತ್ರಿಯವರಿಗೆ ಪತ್ರ ಬರೆದು ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಕೋರಿದ್ದೇನೆ. ಕಳಪೆ ರೀತಿಯಲ್ಲಿ ಕಟ್ಟಿರುವ ಮನೆಗಳ ಬಗ್ಗೆ ಮಾನ್ಯ ಸದಸ್ಯರು ಹೇಳಿದ್ದಾರೆ. ನಾನು ಈಗಾಗಲೇ ಅಧಿಕಾರಿಗಳಿಗೆ ಸೂಚನೆಯನ್ನು ಕೊಟ್ಟಿದ್ದೇನೆ, ನನಗೆ ಗೊತ್ತಿರುವ ಹಾಗೆ ಸರಿಯಾಗಿ ಕಟ್ಟದೇ ಇದ್ದ ಮನೆಗಳ ಕಟ್ಟಡವನ್ನು ಪುನಃ ರಿಪೇರಿ ಮಾಡಿಸಲಾಗಿದೆ. ನಾನು ಬಳ್ಳಾರಿಗೆ ಹೋದ ಸಾರಿ ಹೋಗಿದ್ದಾಗ ಮಾನ್ಯ ಸದಸ್ಯರೊಡನೆಯೂ ಸಹ ಮಾತನಾಡಿದ್ದೇನೆ. ಮತ್ತೆ ಏಪ್ರಿಲ್ ತಿಂಗಳಿನಲ್ಲಿ ಬಳ್ಳಾರಿಗೆ ಬರುತ್ತೇನೆ, ಆಗ ಮಾನ್ಯ ಸದಸ್ಯರು ಅಂತಹ ಮನೆಗಳ ಹತ್ತಿರ ಕರೆದುಕೊಂಡು ಹೋಗಿ ತೋರಿಸಿದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ,

ಶ್ರೀ ಎಂ. ರಾಮಪ್ಪ.—ಹೌಸಿಂಗ್ ಬೋರ್ಡ್‌ನವರು ಕಟ್ಟಿದ ಮನೆಗಳು ಸುಮಾರು ೨೦ ಅಥವಾ ೨೫ ವರ್ಷಗಳಲ್ಲಿ ಬಿದ್ದು ಹೋಗಿ ಬಿಡುತ್ತವೆ. ಕೆಲವು ಮನೆಗಳಂತೂ ೫-೬ ವರ್ಷಗಳಲ್ಲೇ ಬಿದ್ದು ಹೋಗುವ ಪರಿಸ್ಥಿತಿಯಲ್ಲಿ ಇವೆ. ಇಂತಹ ಮನೆಗಳನ್ನು ಕಟ್ಟುವುದಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಏನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಒಬ್ಬ ಇಂಜಿನೀಯರಿಂದ ಹಣ ವಸೂಲಿ ಮಾಡಬೇಕಾಗಿತ್ತು. ಅದನ್ನು ಮಾಡಿದ್ದೇವೆ. ಇನ್ನು ೩ ಜನ ಇಂಜಿನೀಯರ್‌ಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗಿತ್ತು, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದು ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟಿದ್ದರಿಂದ, ಅದನ್ನು ಆ ಇಲಾಖೆಯವರಿಗೆ ತಿಳಿಸಲಾಗಿದೆ. ಹೌಸಿಂಗ್ ಬೋರ್ಡ್‌ನವರು ೧೦ ವರ್ಷಗಳ ಹಿಂದೆ ಕಟ್ಟಿಸಿದ ಮನೆಗಳಿಗೆಲ್ಲಾ ನಾವು ಕ್ರಮ ತೆಗೆದುಕೊಳ್ಳುವುದಕ್ಕೆ ಹೇಗೆ ಸಾಧ್ಯ?

ಶ್ರೀ ಎಂ. ರಾಮಪ್ಪ,—ಆ ಗೌರ್ನಮೆಂಟ್ ಇದ್ದಾಗ ಈ ಕೆಲಸ ಆಯಿತು. ಈ ಗೌರ್ನಮೆಂಟ್ ಇದ್ದಾಗ ಈ ಕೆಲಸ ಆಯಿತು ಎನ್ನುವ ಪ್ರಶ್ನೆ ಇದಲ್ಲ.

ಅಧ್ಯಕ್ಷರು.—ಪ್ರಶ್ನೆ ನಂ. ೫೧೯ (೧೭೧೪) ಸದಸ್ಯರು ಹಾಜರಿಲ್ಲ.